

# ಕಂಬ್ಳಿಹುಳದ ಚಿಟ್ಟೆಪ್ರಪಂಚ

**ರಂಗಭೂಮಿ ಹೇಳಿಕೊಟ್ಟ ಪಾಠಗಳನ್ನು ಪ್ರೀತಿಯಿಂದ ಕಲಿತಿರುವ ನಟಿ ಅಶ್ವಿತ ಹೆಗ್ಡೆ, ತಮ್ಮ ಚೊಚ್ಚಲ ಸಿನಿಮಾ 'ಕಂಬ್ಳಿಹುಳ'ದಿಂದ ಜನಮೆಚ್ಚುಗೆ ಪಡೆದಿದ್ದಾರೆ. ಅತ್ಯುತ್ತಮ ಕಥೆ, ಪಾತ್ರಗಳಿಗೆ ಜೀವ ತುಂಬುವ ಮೂಲಕ ಹೆಸರು ಗಳಿಸುವ ಆಸೆ ಅವರದು.**

■ ಸುಮಲತಾ ಎನ್.



ಎಸ್.ಎನ್. ಸೇತುರಾಂ ನಿರ್ದೇಶನದ 'ಅನಾವರಣ' ಧಾರಾವಾಹಿಯಲ್ಲಿ ಪುಟ್ಟ ಹುಡುಗಿ 'ವರ್ಷಾ'ಳ ಪಾತ್ರದಲ್ಲಿ, ತಮ್ಮ ಪ್ರಬುದ್ಧ ಮಾತು, ನಟನಾ ವೈಖರಿಯಿಂದ ಗಮನ ಸೆಳೆದಿದ್ದವರು ಅಶ್ವಿತ ಹೆಗ್ಡೆ. ಇದೀಗ ಅದೇ ಪ್ರಬುದ್ಧತೆ, ಹೊಸ ಕನಸುಗಳೊಂದಿಗೆ ಸಿನಿಮಾ ರಂಗಕ್ಕೆ ಕಾಲಿಟ್ಟಿದ್ದಾರೆ. ಉತ್ತಮ ಕಲಾವಿದೆಯಾಗಿ ಹೆಸರು ಮಾಡುವ ಹಂಬಲ ಹೊಂದಿದ್ದಾರೆ.

ಅಶ್ವಿತಾ ಮೂಲತಃ ಮೂಡಬಿದಿರೆಯವರು. ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಎಂಬಿಎ ಪದವೀಧರೆ. ರಂಗಭೂಮಿಯ ಒಡನಾಟ ಅವರನ್ನು ಸಿನಿಮಾ ರಂಗದೆಡೆಗೆ ಸೆಳೆದುಕೊಂಡು ಬಂದಿದೆ.

'ಆರನೇ ತರಗತಿಯಲ್ಲಿದ್ದಾಗ ತಂದೆ–ತಾಯಿ ವಿಜಯನಗರದ ಬಿಂಬ ರಂಗ ಶಾಲೆಯಲ್ಲಿ ವಾರಾಂತ್ಯ ತರಬೇತಿಗೆ ಸೇರಿಸಿದರು. ನನ್ನ ರಂಗಭೂಮಿ ಪಯಣ ಅಲ್ಲಿಂದ ಶುರುವಾಯಿತು. ನಾಟಕಗಳಲ್ಲಿ ಅಭಿನಯದ ಜೊತೆಗೆ, ಧಾರಾವಾಹಿಯಲ್ಲಿ ನಟಿಸುವ ಅವಕಾಶವೊಂದು ದೊರೆಯಿತು. ಸೇತುರಾಂ ಅವರ 'ಅನಾವರಣ' ಧಾರಾವಾಹಿಯಲ್ಲಿ ವರ್ಷಾಳ ಪಾತ್ರಕ್ಕೆ ಬಣ್ಣ ಹಚ್ಚಿದೆ. 'ವಿಜಯನಗರ ಬಿಂಬ', 'ಸ್ಪೈಡ್ ವಿಂಗ್' ರಂಗತಂಡಗಳ ಜೊತೆ ನಾಟಕಗಳ ಪ್ರದರ್ಶನ ನೀಡಿದೆ. ಪದವಿ ಓದುತ್ತಿದ್ದಾಗ ಎರಡು ಕಿರುಚಿತ್ರಗಳಲ್ಲಿ ಕೂಡ ಅಭಿನಯಿಸಿದೆ' ಎಂದು ತಮ್ಮ ನಟನೆಯ ನಂಟನ್ನು ವಿವರಿಸುತ್ತಾರೆ ಅಶ್ವಿತಾ.

ನಟನೆಯ ಮೂಲ ಪಟ್ಟುಗಳ ಪರಿಚಯವಾದ ಮೇಲೂ ಸಿನಿಮಾದಲ್ಲಿ ನಟಿಸುವ ಯಾವುದೇ ಆಲೋಚನೆ ಅವರಿಗೆ ಇರಲಿಲ್ಲವಂತೆ. 'ಸಿನಿಮಾ ನಟನೆಯ ಕುರಿತು ಯೋಚನೆಯೇ ಇರಲಿಲ್ಲ. ಅದರೆಡೆಗೆ ಪ್ರಯತ್ನವನ್ನೂ ಮಾಡಿರಲಿಲ್ಲ. ರಂಗಭೂಮಿಯಲ್ಲಿ ಹೆಸರು ಮಾಡಬೇಕೆಂಬ ತುಡಿತ ಮಾತ್ರ ಯಾವಾಗಲೂ ಇತ್ತು, ಈಗಲೂ ಇದೆ' ಎನ್ನುತ್ತಾರೆ.

ಅವರನ್ನು ಸಿನಿಮಾ ಲೋಕದೆಡೆಗೆ ಪ್ರೇರೇಪಿಸಿದ್ದು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ. ಚಿತ್ರೋತ್ಸವ ಆಯೋಜಕರ ತಂಡದಲ್ಲಿ ಕೆಲಸ ಮಾಡುತ್ತಿದ್ದ ಅವರಿಗೆ ಅಲ್ಲಿ ಹೊಸ ಜಗತ್ತೊಂದು ತೆರೆದುಕೊಂಡಿತ್ತು. ಹಲವು ಸಿನಿಮಾ ನಿರ್ದೇಶಕರು, ನಟರು, ಬರಹಗಾರರು, ಎಷ್ಟೋ ವರ್ಷಗಳಿಂದ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲು ನಿರಂತರ ಪ್ರಯತ್ನದಲ್ಲಿ ತೊಡಗಿಕೊಂಡುದನ್ನು ಕಂಡ ಅವರಲ್ಲೂ ಸಿನಿಮಾದೆಡೆಗೆ ಆಕರ್ಷಣೆಯೊಂದು ಮೂಡಿತ್ತು.

ಸಿನಿಮಾದಲ್ಲಿ ನಟಿಸಬೇಕು, ಅದು ಕೈಗೂಡದಿದ್ದರೆ ಹೇಗಿದ್ದರೂ ಎಂಬಿಎ ಜೊತೆಗಿದೆ ಎಂದು ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದ ಅವರ ಮುಂದೆ, ಆಕಸ್ಮಿಕ ಎಂಬಂತೆ 'ಕಂಬ್ಳಿಹುಳ' ಸಿನಿಮಾದ ಅವಕಾಶ ಬಂದು ಕುಳಿತಿತ್ತು. ಸಿನಿಮಾ ನಿರ್ದೇಶಕ ನಮನ್ ಶ್ರೀನಿವಾಸ್ ಅವರೊಂದಿಗೆ ಮಾತನಾಡಿದ ನಂತರ, ತಮ್ಮ ಸಿನಿಮಾರಂಗದ ಭವಿಷ್ಯಕ್ಕೆ ಇದೇ ಒಳ್ಳೆಯ ಮುನ್ನುಡಿ ಎಂದು ಮಲೆಯಾಳಿ ಹುಡುಗಿಯ ಪಾತ್ರ ಒಪ್ಪಿಕೊಂಡು ಬಣ್ಣ ಹಚ್ಚಲು ಅಣಿಯಾದರು.

ಇದೀಗ ತಮ್ಮ ಮೊದಲ ಸಿನಿಮಾದಲ್ಲಿಯೇ ಮೆಚ್ಚುಗೆಯ ಬಹುಮಾನ ಪಡೆದುಕೊಂಡಿದ್ದಾರೆ. ಹೊಸಬರ 'ಕಂಬ್ಳಿಹುಳ' ಸಿನಿಮಾಗೆ ಸಹೃದಯರಿಂದ ನಿರೀಕ್ಷೆಗಿಂತ ಉತ್ತಮ ಪ್ರತಿಕ್ರಿಯೆ ದೊರೆತಿರುವುದು ನೋಡಿ ಪುಳಕಿತರಾಗಿದ್ದಾರೆ. 'ಈ ಸಿನಿಮಾಗೆ ಇಷ್ಟು